ಕುಂದಾಪುರಕ್ಕೆ ಸಾಗಿಸುವುದು ಸಾಧ್ಯವೋ ಹೇಗೆ ಎಂಬ ಚಿಂತೆ ಮೂರ್ತಿಯವರನ್ನು ಆವರಿಸಿತ್ತು. ಖರ್ಚೆಷ್ಟು ಬೀಳಬಹುದು ಎಂಬ ಆತಂಕವೂ ಇತ್ತು. ಗೋಪಾಲನ ಮನೆಗೆ ಹೋಗಿ ರಾತ್ರಿಯೇ ಭೇಟಿಯಾದರು. “ಒಂದು ವಾರ ಕಳ್ಳರ ತನಿಖೆಗೇ ಬೇಕು. ಅವರು ಎಲ್ಲೆಲ್ಲಿಂದ ಕದ್ದಿದ್ದಾರೆ ಎಂಬುದು ಸಾಬೀತಾಗಬೇಕು. ಅಸಲಿ ಮಾಲೀಕರು ಯಾರೆಲ್ಲ ಎಂಬ ನಿರ್ಣಯವಾಗಬೇಕು. ಕಳ್ಳರು ನಿಮ್ಮ ಹಟ್ಟಿಗೂ ಬಂದು ಇಲ್ಲಿಯೂ ಒಂದು ದನ ಕದ್ದಿದ್ದೇವೆ ಎಂದರೆ ನಿಮ್ಮ ದನ ಕ್ಷಿಪ್ರವಾಗಿ ನಿಮ್ಮ ಕೈ ಸೇರುತ್ತದೆ. ಅವರೆಲ್ಲಾದರೂ ದಾರಿ ತಪ್ಪಿ ನಿಮ್ಮ ಹಟ್ಟಿಗೆ ಬರಲಿಲ್ಲವೆಂದಾದರೆ ಆ ದನ ನಿಮ್ಮದು ಎನ್ನುವುದನ್ನು ನೀವು ಪ್ರೂವ್ ಮಾಡಬೇಕಾಗುತ್ತದೆ. ಕಪ್ಪುಬಣ್ಣದ ದನ ಎಂದ ಮಾತ್ರಕ್ಕೆ ದನವನ್ನು ನಿಮ್ಮ ಕೈಗೆ ಕೊಡಲು ಬರುವುದಿಲ್ಲ. ನೋಡೋಣ ಎಸ್.ಐ ಗೆ ನಾನು ಹೇಳುತ್ತೇನೆ. ಕಳ್ಳರಲ್ಲೊಬ್ಬರನ್ನು ನಿಮ್ಮ ಹಟ್ಟಿಗೆ ತರಿಸೋಣ. ನೀವು ಹೆದರಬೇಡಿ” ಎಂದ. ಗೋಪಾಲನ ಮೇಲೆ ನಂಬುಗೆ ಸಾಕಾಗದೆ ಮರುದಿನ ಮೂರ್ತಿ ತಮ್ಮ ದೂರದ ಸಂಬಂಧಿ ವಕೀಲ ರಾಮಗೋಪಾಲನನ್ನು ಭೇಟಿಯಾದರು. “ಒಂದು ವಾರದೊಳಗೆ ಕಷ್ಟ. ನಿಮಗೆ ಒಂದು ದಾರಿಯಿದೆ. ನಿಮ್ಮ ಪ್ರಯಾಣದ ದಾಖಲೆಗಳನ್ನು ಒದಗಿಸಿ, ನೀವು ಹಿಂತಿರುಗಿದ ಮೇಲೆ ದನವನ್ನು ನಿಮ್ಮ ವಶ ಒಪ್ಪಿಸಬೇಕೆಂದೂ, ಹೆಚ್ಚುವರಿ ದಿನಗಳ ಖರ್ಚನ್ನು ಭರಿಸಲು ನೀವು ಸಿದ್ಧರಿದ್ದೀರಿ ಎಂದೂ ಬರೆದು ಕೊಡೋಣ. ಇದಕ್ಕೆ ಅವರು ಒಪ್ಪಿದರೆ ನೀವು ಹಿಂದೆ ಬರುವ ವರೆಗೂ ನಿಮ್ಮ ದನ ಸರಕಾರೀ ಸುಪರ್ದಿನಲ್ಲಿರುತ್ತೆ. ನಿಮ್ಮ ಕೆಲಸವಾಯಿತಲ್ಲ!” ಅಂದರು ವಕೀಲರು. ಮೂರ್ತಿರಾಯರು ಒಪ್ಪಿದರು. ಆದರೆ ಗೌರಿಯಮ್ಮ ಅದಕ್ಕೆಲ್ಲ ಒಪ್ಪಲಿಲ್ಲ. “ಗಬ್ಬದ ದನಕ್ಕೆ ಸ್ಟೇಶನ್ನಿನಲ್ಲಿ ಸರಿಯಾಗಿ ಒಣಹುಲ್ಲಾದರೂ ಹಾಕುತ್ತಾರೋ ಇಲ್ಲವೋ... ಅಲ್ಲೆಲ್ಲ ಬಿಡುವುದು ಬೇಡ, ಆದಷ್ಟು ಬೇಗ ಹಿಂದೆ ಪಡೆಯೋಣ”ಎಂದು ಪಟ್ಟು ಹಿಡಿದರು.

ಪ್ರಯಾಣದ ದಿನ ಹತ್ತಿರವಾಗುತ್ತಿದ್ದಂತೆ ಮೂರ್ತಿಯವರಿಗೆ ಅಷ್ಟರೊಳಗೆ ದನ ಕೈಗೆ ಸಿಗುವ ಧೈರ್ಯ ತಪ್ಪಿತ್ತು. “ದನ ಇನ್ನೂ ಸಿಕ್ಕಿಲ್ಲ ಅವಳೊಬ್ಬಳೇ ಬಂದರೆ ಹೇಗೆ” ಎಂದರು ಮೂರ್ತಿರಾಯರು ಅಳಿಯನಲ್ಲಿ. ವಿದ್ಯಮಾನಗಳನ್ನೆಲ್ಲ ಅರಿತಿದ್ದ ಅಳಿಯ ಮಾವನ ಟಿಕೆಟ್ ದಿನಾಂಕ ಮುಂದೂಡಲು

